ಹೆಂಡತಿಯಾಗಿದ್ದೆನಲ್ಲ! ನಾನೆಲ್ಲವನ್ನೂ ಅರ್ಥ ಮಾಡಿಕೊಳ್ಳುತ್ತಿದ್ದೆ. ಅದಕ್ಕೇ ಅವರ ನೆನಪುಗಳು ನನಗೆ ಮುಳ್ಳಿನಂತೆ ಚುಚ್ಚುತ್ತವೆ' ಎಂದರು ಅಮ್ಮ.

'ಒಳ್ಳೆಯ ನೆನಪುಗಳು ಸಹ ಇರಬಹುದು?'

'ಆದ್ರೆ ತುಂಬಾ ಕಡಿಮೆ. ಅವರು ನನ್ನನ್ನು ನಿಜವಾಗಿ ಪ್ರೀತಿಸಿದ್ದಾದರೂ ಯಾವಾಗ?' ಅಮ್ಮ ಗಂಭೀರವಾಗಿ ಹೇಳಿದರು. ಅವರು ಕೆಲವು ವರ್ಷಗಳ ಹಿಂದಾಗಿದ್ದರೆ ಬಹುಶಃ ಈ ಸತ್ಯವನ್ನು ನನ್ನೆದುರು ಹೇಳುತ್ತಿರಲಿಲ್ಲ. ಆದರೆ ಈಗ ಅವರಿಗೆ, ತಮ್ಮ ಮಗಳು ಈ ವಿಷಯಗಳನ್ನು ಅರ್ಥ ಮಾಡಿಕೊಳ್ಳುವಷ್ಟು ದೊಡ್ಡವಳಾಗಿದ್ದಾಳೆ, ಅಲ್ಲದೆ ಅವಳು ಖುದ್ದು ಇದನ್ನೆಲ್ಲಾ ಅನುಭವಿಸಿ ಇಲ್ಲಿಗೆ ಬಂದಿದ್ದಾಳೆ ಎಂಬುದು ತಿಳಿದಿತ್ತು.

'ಅಪ್ಪನಿಂದ ಬೇರೆಯಾದ ನಂತರ ನೀವು ಸುಖವಾಗಿದ್ದಿರ?' ನಾನು ಮತ್ತೆ ಪ್ರಶ್ನಿಸಿದೆ. ಅಮ್ಮನನ್ನು ಈ ರೀತಿಯಲ್ಲಿ ಕೆದಕುವುದು ಉಚಿತವಾಗಿತ್ತೋ, ಇಲ್ಲವೋ ನನಗೆ ತಿಳಿದಿಲ್ಲ. ಆದರೆ ನಾನು ಬಹುಶಃ ನನ್ನ ಜೀವನದ ಪ್ರಶ್ನೆಗಳಿಗೆ ಉತ್ತರಗಳನ್ನು ಅವರ ಜೀವನದಲ್ಲಿ ಅರಸುತ್ತಿದ್ದೆ.

'ಇಲ್ಲ! ಈ ಸಮಾಜ ಗಂಡನಿಂದ ಬೇರೆಯಾದ ಹೆಣ್ಣು ಸುಖವಾಗಿರಲು ಬಿಡಲ್ಲ', ಅಮ್ಮ ಈ ಮಾತನ್ನು ನಾನು ರಿತಿಕ್‌ನೊಂದಿಗಿದ್ದಾಗಲೂ ಹೇಳಿದ್ದರು.

'ಸೆಲಟ್ ಅಂಕಲ್ ಮತ್ತು ಅವರ ನಂತರ ನಿಮ್ಮ ಜೀವನದಲ್ಲಿ ಬಂದ...' ನಾನು 'ಪುರುಷರು' ಶಬ್ದವನ್ನು ಹೇಳಲು ಹಿಂಜರಿದೆ. ಎಷ್ಟಾದರೂ ನಾನು ನನ್ನ ತಾಯಿಯೊಂದಿಗೆ ಮಾತನಾಡುತ್ತಿದ್ದೆ, ಅಮ್ಮನೊಂದಿಗೆ ನಾನು 'ಮರ್ಯಾದೆ'ಯನ್ನು ಮೀರಿ ಹೋಗುತ್ತಿರಲಿಲ್ಲ. 'ಪುರುಷ' ಶಬ್ದದ ಪ್ರಯೋಗ ಆ ಮರ್ಯಾದೆಗೆ ಅಡ್ಡ ಬಂದಿತ್ತು.

'ಅವರು ನನಗೆ ಆಸರೆಯನ್ನು ಕೊಡುತ್ತಿದ್ದರು, ನಾನೂ ಅವರಿಗೆ ಆಸರೆಯನ್ನು ಕೊಡುತ್ತಿದ್ದೆ. ಸುಖ ಅಥವಾ ಪ್ರೀತಿಗೆ ವಿಶಾಲ ಅರ್ಥವಿರುತ್ತದೆ. ಅದನ್ನು ಕಡಿಮೆ ಮಾಡಿ ಅಳೆಯಲಾಗದು. ಉದಾಹರಣೆಗೆ ಯಾರಾದರು ನಿನಗೆ ಅಡುಗೆ ಮಾಡುವ ಗ್ಯಾಸ್ ಸಿಲಿಂಡರ್ ಕೊಟ್ಟರೆ, ಅದರಿಂದ ಒಂದು ಸಮಸ್ಯೆ ಪರಿಹಾರವಾಗುವುದು, ನೀನು ಅವರಿಗೆ ಕೃತಜ್ಞತೆ ಮತ್ತು ಧನ್ಯವಾದಗಳನ್ನು ಹೇಳುತ್ತೀಯ; ಆದರೆ ಇಷ್ಟು ಮಾತ್ರದಿಂದ ನಿನಗೆ ಅವರೊಂದಿಗೆ ಪ್ರೀತಿ ಹುಟ್ಟಿತು ಎಂದು ನೀನು ಹೇಳಲಾರೆ. ಏಕೆಂದರೆ ಅವರು ನಿನ್ನ ಸಾಮೀಪ್ಯವನ್ನು ಪಡೆಯುವುದಕ್ಕಾಗಿ ಹೀಗೆ ಮಾಡಿದ್ದು, ಆದರೆ ನಿನ್ನನ್ನು ಪ್ರೀತಿಸಲು ಅಲ್ಲ ಎಂಬುದು ನಿನಗೂ ಸಹ ತಿಳಿದಿದೆ'.

ಅಮ್ಮ ಜೀವನದ ಬಗ್ಗೆ ಇಷ್ಟು ದಾರ್ಶನಿಕವಾಗಿ ಮಾತನಾಡುತ್ತಾರೆ ಎಂದು ನಾನು ಯೋಚಿಸಿರಲಿಲ್ಲ. ವಾಸ್ತವವಾಗಿ ಜೀವನವನ್ನು ಅರ್ಥ ಮಾಡಿಕೊಳ್ಳಲು ರಾಶಿರಾಶಿ ಪುಸ್ತಕಗಳನ್ನು ಓದುವ ಅಗತ್ಯವಿಲ್ಲ, ಜೀವನವನ್ನು ಅರ್ಥ ಮಾಡಿಕೊಳ್ಳಲು ಜೀವನದ ಅನುಭವಗಳಿಂದ ಹಾದು ಹೋಗುವುದು ಅವಶ್ಯವಾಗಿದೆ.

ಅಮ್ಮನ ನಂಬಿಕೆ ನಿಜವೆಂದು ಸಾಬೀತಾಯಿತು. ಹದಿನೈದು ದಿನಗಳ ಒಳಗೆ ಜಬಲಪುರದಿಂದ ಸಾಗರಕ್ಕೆ ನನ್ನ ವರ್ಗಾವಣೆಯಾಯಿತು. ಭೂಪಾಲ್‌ನಲ್ಲಿ ಜಾಗ ಖಾಲಿ ಇರಲಿಲ್ಲ. ಭೂಪಾಲ್‌ನಿಂದ ಸಾಗರಕ್ಕೆ ಐದು ಗಂಟೆಯ ಪ್ರಯಾಣವಾಗಿದ್ದು, ಸಾಗರ ಒಂದು ಪ್ರಶಾಂತ ನಗರವಾಗಿತ್ತು. ನಾನು ಸಾಗರಕ್ಕೆ ಹೋಗುವುದಕ್ಕೆ ಒಪ್ಪಿಕೊಂಡೆ. ನಾನು ಒಂದು

